ಗಬವಡಿ–974

# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

9/2, 6ನೇ ಮಹಡಿ, ಮಹಾಲಕ್ಷ್ಮಿ ಚೇಂಬರ್ಸ್, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560 001

**ಉಪಸ್ಥಿತಿ : ಶ್ರೀ ಬಿ.ಎನ್. ಕೃಷ್ಣಯ್ಯ**
ವಿದ್ಯುಚ್ಛಕ್ತಿ ಲೋಕಪಾಲರು

**ಪ್ರಕರಣ ಸಂಖ್ಯೆ OMB/B/G-278/2017**

**ಆದೇಶ ದಿನಾಂಕ : 09-01-2018**

ಶ್ರೀ ನಾಗಣ್ಣಗೌಡ
ನಂ.270/1, ಶ್ರೀ ಮಂಜುನಾಥ ಪ್ಲಾಜ
ರಾಮ ಮೂರ್ತಿನಗರ ಮುಖ್ಯ ರಸ್ತೆ,
ಬೆಂಗಳೂರು – 560 016 ಮೇಲ್ಮನವಿದಾರರು

(ಖುದ್ದು ಹಾಜರಿ)

V/S

1. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ)
ಇ–7, ಉಪ–ವಿಭಾಗ
ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
ದೂರವಾಣಿ ನಗರ, ಬೆಂಗಳೂರು – 560 016

2. ಅಧ್ಯಕ್ಷರು
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ
ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
ಸಿ.ಎ. ನಿವೇಶನ ಸಂಖ್ಯೆ–5
ಪಶ್ಚಿಮ ಕಾರ್ಡ್ ರಸ್ತೆ, 3ನೇ ಹಂತ,
ಭೀಮಜ್ಯೋತಿ, ಎಚ್.ಬಿ.ಸಿ.ಎಸ್ ಬಡಾವಣೆ,
ಕಾರ್ಡ್ ಆಸ್ಪತ್ರೆ ರಸ್ತೆ ಹತ್ತಿರ, ಬಸವೇಶ್ವರ,
ಬೆಂಗಳೂರು – 560 079.

1. ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ (ಗ್ರಾಹಕರ ಕುಂದುಕೊರತೆ ನಿರ್ವಹಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ ಕಲಂ 21.02ರ ಅಡಿಯಲ್ಲಿ ಗ್ರಾಹಕರ ಕುಂದುಕೊರತೆ ನಿರ್ವಹಣಾ ವೇದಿಕೆ, ಬೆಂಗಳೂರು, ಇವರ ದಿನಾಂಕ 27.2.2017ರ ಆದೇಶದ ವಿರುದ್ಧ ದಾಖಲಿಸಲಾಗಿದೆ.

2. ದಿನಾಂಕ 15.3.2017ರ ಈ ಪ್ರಾಧಿಕಾರದ ಪತ್ರದಲ್ಲಿ ಇ7 ಉಪ–ವಿಭಾಗದ ಸಹಾಯಕ ನಿರ್ವಾಹಕ ಇಂಜಿನಿಯರ್ ರವರಿಂದ ಮೇಲ್ಮನವಿಗೆ ಉತ್ತರವನ್ನು ಕೇಳಲಾಗಿ, ಸಹಾಯಕ ನಿರ್ವಾಹಕ ಇಂಜಿನಿಯರ್, ದೂರವಾಣಿ ನಗರ, ಬೆಂಗಳೂರು, ರವರು ತಮ್ಮ ಪತ್ರ ದಿನಾಂಕ 4.4.2017 ರಲ್ಲಿ ಖಂಡಿಕೆವಾರು ಉತ್ತರವನ್ನು ಕಳುಹಿಸಿರುತ್ತಾರೆ.

3. ಮೇಲ್ಮನವಿದಾರರು ದಿನಾಂಕ 13.3.2017ರ ಲಿಖಿತ ಪತ್ರದಲ್ಲಿ ತಮ್ಮ ವಾದವನ್ನು ಈ ಕೆಳಕಂಡಂತೆ ಮಂಡಿಸಿದ್ದು, ಯಥಾವತ್ ದಾಖಲಿಸಿದೆ.

(ಎ) ಆರ್.ಆರ್.ಸಂಖ್ಯೆ 7 ಇ ಸಿ ಎಲ್ 12389 ಸ್ಥಾವರದ ಕಟ್ಟಡದಲ್ಲಿ ಕ್ಯೂಟಿಸ್ ಪಾರ್ಲರನು ನಡೆಸುತ್ತಿದ್ದೇವೆ. ಈ ಸ್ಥಾವರಕ್ಕೆ 6 ಕಿಲೊ ವ್ಯಾಟ್ ಹೊರೆಯನ್ನು ಪಡೆದಿದ್ದು ಮಾಪಕ ಪರೀಕ್ಷೆ ವಿಭಾಗ, ಇಂದಿರಾನಗರ ವಿಭಾಗ ಇವರು ನನ್ನ ಸ್ಥಾವರಕ್ಕೆ ದಿನಾಂಕ 19.05.2014 ರಂದು ವಿದ್ಯುತ್ ಮೀಟರನ್ನು ಪರಿಶೀಲಿಸಿ ಅದರ ಬಗ್ಗೆ ವರದಿಯನ್ನು ನನಗೂ ಮತ್ತು ಎ–7 ವಿಭಾಗ, ದೂರವಾಣಿನಗರ, ಬೆಂಗಳೂರು – 560 016 ರವರಿಗೂ ಕೊಟ್ಟಿರುತ್ತಾರೆ. ಈ ವರದಿಯ ಪ್ರಕಾರ ಸಹಾಯಕ ಕಾರ್ಯನಿರ್ವಾಹಕ ಎಂಜಿನೀಯರ್, ಇ–7 ಉಪ ವಿಭಾಗ, ದೂರವಾಣಿನಗರ ರವರು ನನಗೆ ನೋಟಿಸನ್ನು ದಿನಾಂಕ 4.9.2015 ರಂದು ಹೊರಡಿಸಿದ್ದು ನಾನು 21.9.2015 ರಂದು ಸ್ವೀಕರಿಸಿದ್ದೇನೆ. ನಂತರ ನೋಟೀಸಿಗೆ ಮನವಿಯನ್ನು ನಂ.1212 ದಿನಾಂಕ 1.10.2015 ರಂದು ಸಲ್ಲಿಸಿ ಪಡೆದಿರುತ್ತೇನೆ. ನಂತರ ಇದರ ಬಗ್ಗೆ ಸಾಕಷ್ಟು ಬಾರಿ ವಿಚಾರಿಸಲಾಗಿ ನನಗೆ ಇ–7 ಉಪ ವಿಭಾಗದವರು ದಿನಾಂಕ 15.3.2016

ರಂದು ಮೌಖಿಕ ಆದೇಶ ಸಂಖ್ಯೆ 2939, ದಿನಾಂಕ 15.2.2016 ಅನ್ನು ಕೊಟ್ಟಿರುತ್ತಾರೆ. ಈ ಆದೇಶದ ಪರವಾಗಿ ನಾನು ತಮ್ಮಲ್ಲಿ ಮೇಲ್ಮನವಿ ಸಲ್ಲಿಸುತ್ತಿದ್ದೇನೆ.

(ಬಿ) ನಾನು ಈ ಮೇಲ್ಕಂಡ ಸ್ಥಾವರದಲ್ಲಿ 6 ಕಿಲೋ ವ್ಯಾಟ್ ಹೊರೆಯನ್ನು ಪಡೆದಿದ್ದು ಈವತ್ತಿನವರೆಗೂ ೪ ಕಿಲೊ ವ್ಯಾಟ್ ಹೊರೆಯಿಂದ ಹೆಚ್ಚಿಗೆ ಬಳಸುತ್ತಿಲ್ಲ.

(ಸಿ) ಮಾಪನ ವಿಭಾಗದವರು ಸ್ಥಾವರದಲ್ಲಿರುವ ಪರಿಕರಗಳನ್ನು ನೋಡಿ ಅದರ ಪ್ರಕಾರ ಸುಮಾರು 16 ಕಿಲೋ ವ್ಯಾಟ್‌ವರೆಗೆ ಹೊರೆಯನ್ನು ಹೊಂದಿರುತ್ತಾರೆಂದು ತಿಳಿಸುತ್ತಾರೆ. ಆದರೆ ನಾವುಗಳು ಅಷ್ಟು ಹೊರೆಯನ್ನು ಹೊಂದಿರುವುದಿಲ್ಲ.

(ಡಿ) ನಾನು ನನ್ನ ಮನವಿಯಲ್ಲಿ ಸುಮಾರು 3 ರಿಂದ 4 ಕಿಲೋ ವ್ಯಾಟ್ ವರೆಗೆ ಮಾತ್ರ ಬಳಸುತ್ತಿದ್ದು ಎಂದು ತಿಳಿಸಿದ್ದರೂ ಸಹ ಇ–7 ಉಪ ವಿಭಾಗದವರು, ಅದನ್ನು ಪರಿಗಣಿಸದೆ ಮೌಖಿಕ ಆದೇಶ (speaking order) ದಿನಾಂಕ 15.2.2016 ರಂದು ಹೊರಡಿಸಿದ್ದು ಅದನ್ನು ನನಗೆ 15.03.2016 ರಂದು ಕೊಟ್ಟಿರುತ್ತಾರೆ.

(ಇ) ನನ್ನ ಸ್ಥಾವರದ ಮಾಸಿಕ ವಿದ್ಯುತ್ ಬಿಲ್ಲು ಸಹ ಇಂದಿನವರೆವಿಗೂ ರೂ.3,000/- ಗಿಂತ ಅಧಿಕ ದಾಟಿರುವುದಿಲ್ಲ ಮತ್ತು ಹೊರೆಯು ಸಹ 4 ಕಿಲೋ ವ್ಯಾಟ್‌ಗಿಂತ ಹೆಚ್ಚಿಗೆ ಉಪಯೋಗಿಸಿರುವುದಿಲ್ಲ.

(ಎಫ್) ಮಾಪಕ ವಿಭಾಗದವರು ಸಹ ಅವರ ವರದಿಯಲ್ಲಿ ಅವರು ಬಳಸುತ್ತಿರುವ ಹೊರೆಯನ್ನು ೫ ಕಿಲೋ ವ್ಯಾಟ್ ಎಂದು ತೋರಿಸಿರುತ್ತಾರೆ ಹಾಗೂ ಅವರ್ಥ ಹೊರೆಯು ಸಹ 4 ಕಿಲೋ ವ್ಯಾಟ್ ಎಂದು ತೋರಿಸಿದ್ದು ಮತ್ತು ಬಳಸುತ್ತಿರುವ ಮಾಪಕವು ಸರಿಯಾಗಿದೆ ಎಂದು ತಿಳಿಸಿರುತ್ತಾರೆ. ಹಾಗೂ ಅದೇ ಮಾಪಕ ವಿಭಾಗದವರು ತಮ್ಮ ವರದಿಯನ್ನು ಕಛೇರಿ ಕ್ರಮ ಸಂಖ್ಯೆ no.nil, EE/MT/EAST/AEBNG dt. 19.5.2014 ಇದ್ದು ಪು.ತಿ.ನೊ 19.5.2015ನ್ನು ನಮೂದಿಸಿರುತ್ತೇನೆ.

(ಜಿ) ಸ್ಥಾವರದಲ್ಲಿ 6 ಕಿಲೋ ಹೊರೆ ಹೊಂದಿದ್ದು ಅಧಿಕ 9618 ಕಿಲೋ ವ್ಯಾಟ್ ಹೊರೆ ಇರುವುದರಿಮದ ಬಿ ಬಿ ಸಿ ಯನ್ನು ಬೆಸ್ಕಾಂಗೆ ಅನುಗುಣವಾಗಿ ಕ್ರಮ ಜರುಗಿಸಲು ತಿಳಿಸಿರುತ್ತಾರೆ. ಸ್ಥಾವರದಲ್ಲಿ ಇರುವ ಪರಿಕರಗಳ ಮೇಲೆ ಮಾಪಕ ವಿಭಾಗದವರು ಅನುಮಾನಿಸಿ ವರದಿಯನ್ನು ಕೊಟ್ಟಿರುತ್ತಾರೆ. ಆದರೆ ನಾನು ಹೆಚ್ಚುವರಿ 9618 ಕಿಲೋ ವ್ಯಾಟ್ ಹೊರೆಯನ್ನು ಬಳಕೆ ಮಾಡಿರುವುದಿಲ್ಲ.

(ಹೆಚ್) ಇ–7 ಉಪ ವಿಭಾಗ ಇವರುಗಳು ನನ್ನ ಸ್ಥಾವರಕ್ಕೆ ಬೇಟಿ ಕೊಟ್ಟು ಮಾಪಕವನ್ನು ಪರಿಶೀಲಿಸಿ 4 ಕಿಲೋ ವ್ಯಾಟ್‌ಗಿಂತ ಅಧಿಕ ಹೊರೆ ಬಳುಸುತ್ತಿಲ್ಲ ಎಂದು ತಿಳಿಸಿ ವರದಿಯನ್ನು ಇ–7 ಉಪ ವಿಭಾಗಕ್ಕೆ ಕಳುಹಿಸಿರುತ್ತಾರೆ. ಈಗ ಅಳವಡಿಸುತ್ತಿರುವ ಮಾಪಕಗಳಲ್ಲಿ ಹೊರೆಯು ಅಧಿಕವಾಗಿ ಉಪಹೋಗಿಸುತ್ತಿದ್ದರೆ ಹೆಚ್ಚುವರಿ ಹಣವನ್ನು ಕಟ್ಟಲು ತಿಳಿಸುತ್ತಾರೆ. ಆದರೆ ನನ್ನ ವಿಚಾರದಲ್ಲಿ ಹೆಚ್ಚಾಗಿ ಬಳಸಿಲ್ಲದಿದ್ದರೂ ಆದೇಶವನ್ನು ಮಾಡಿರುತ್ತಾರೆ.

(ಐ) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಇ–7 ಉಪ ವಿಭಾಗ ಇವರ ಮೌಖಿಕ ಆದೇಶ ನ್ಯಾಯ ಸಮ್ಮತವಾಗಿಲ್ಲ ಹಾಗೂ ಅವೈಜ್ಞಾನಿಕವಾಗಿರುವುದರಿಂದ ತಾವುಗಳು ನನಗೆ ಸ್ಥಾವರದ ಹೊರೆಯನ್ನು ಇಂದಿನವರೆಗೆ ಉಪಯೋಗಿಸಿರುವ ಹೊರೆಯ ವರದಿಯನ್ನು ಪಡೆದು ನ್ಯಾಯಸಮ್ಮತವಾದ ಆದೇಶವನ್ನು ಕೊಡಬೇಕೆಂದು ಕೋರುತ್ತೇನೆ.

4. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್, ಎ–7 ಉಪ ವಿಭಾಗ ರವರು ತಮ್ಮ ಪತ್ರ ದಿನಾಂಕ 4.4.2017 ರಲ್ಲಿ ಈ ಕೆಳಗಿನಂತೆ ತಮ್ಮ ವಿವರಣೆಯನ್ನು ಮಂಡಿಸಿದ್ದಾರೆ.

(ಅ) 7ECL12389 ರ ಸ್ಥಾವರವು ಶ್ರೀ ನಾಗಣ್ಣ ಗೌಡ ಎಂಬುವರಿಗೆ ಸೇರಿದ್ದು ಇದರ ಮಂಜೂರಾತಿ ಹೊರೆಯು 6 ಕಿ.ವ್ಯಾ. ಗಳಾಗಿದ್ದು. ದಿನಾಂಕ 19.05.2014 ರಲ್ಲಿ ಮಾಪಕ ಪರಿವೀಕ್ಷಕರು ತಪಾಸಣೆ ನಡೆಸಿ ಸ್ಥಾವರದಲ್ಲಿ ಸಂಪರ್ಕಿತ ಹೊರೆಯು 15.618 ಕಿ.ವ್ಯಾ ಗಳಷ್ಟು ಇರುವುದರಿಂದ ಹೆಚ್ಚಿನ ಹೊರೆಯು 10 ಕಿ.ವ್ಯಾ ಗಳಿಗೆ ಬಿಬಿಸಿಯನ್ನು ರೂ.9600/- ಗಳನ್ನು ವಿಧಿಸಲಾಯಿತು.

(ಬಿ) ದಿನಾಂಕ 4.9.2015 ರಲ್ಲಿ ಬಿಬಿಸಿಯ ಡಿಮ್ಯಾಂಡ್ ನೋಟೀಸನ್ನು ನೀಡಲಾಗಿರುತ್ತದೆ. ಅದಕ್ಕೆ ಗ್ರಾಹಕರಿಂದ ದಿನಾಂಕ 1.10.2015 ರಂದು ಆಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ. ಅದರನ್ವಯ ದಿನಾಂಕ 4.11.2015 ರಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಾಪಕ ಪರೀಕ್ಷೆ ವಿಭಾಗ, ಬೆವಿಕಂ ರವರಿಗೆ ಸ್ಥಾವರವನ್ನು ಮರು ಪರಿಶೀಲಿಸಬೇಕೆಂದು ಪತ್ರ ಬರೆಯಲಾಯಿತು. ಆ ಪತ್ರಕ್ಕೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಾಪಕ ಪರೀಕ್ಷೆ ವಿಭಾಗ, ಬೆವಿಕಂ ರವರು ಗ್ರಾಹಕರು ಮಂಜೂರಾತಿಯ ಹೊರೆಗಿಂತ ಹೆಚ್ಚಿನ ಹೊರೆಯನ್ನು ಹೊಂದಿದ್ದು, ಏಕ ಕಾಲದಲ್ಲಿ ಎಲ್ಲಾ ಉಪಕರಣಗಳನ್ನು ಉಪಯೋಗಿಸದೆ ಇದ್ದರೂ ಸಹ ಹೆಚ್ಚಿನ ಹೊರೆಯ ಉಪಕರಣಗಳನ್ನು ಹೊಂದಿರುವುದರಿಂದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ವಿದ್ಯುತ್ ಸರಬರಾಜು ಮತ್ತು ವಿತರಣೆಗಳ ಅಧಿನಿಯಮ–2006 ಷರತ್ತು 42.01 ಅನ್ವಯ ಹೆಚ್ಚಿನ ಹೊರೆಗೆ ಬಿ ಬಿ ಸಿ ಯನ್ನು ವಿಧಿಸಲಾಗಿದೆ ಎಂದು ತಿಳಿಸಿರುತ್ತಾರೆ.

(ಸಿ) ನಂತರ ವರದಿ ವಿಷಯದಲ್ಲಿ ಮಾಡಿರುವ ಬಿ ಬಿ ಸಿ ಯು ಸರಿಯಾಗಿದೆ ಎಂದು ದಿನಾಂಕ 15.2.2016 ರಲ್ಲಿ ಮೌಖಿಕ ಆದೇಶವನ್ನು ಈ ಕಛೇರಿಯಿಂದ ನೀಡಲಾಗಿದೆ.

(ಡಿ) ಮುಂದುವರೆದು ಗ್ರಾಹಕರು ದಿನಾಂಕ 22.7.2015ರಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬೆಂಗಳೂರು ನಗರ, ಬಸವೇಶ್ವರನಗರ, ಬೆಂಗಳೂರು – 79 ಇಲ್ಲಿ ದೂರನ್ನು ದಾಖಲು ಮಾಡಿರುತ್ತಾರೆ. ಸದರಿ ವೇದಿಕೆಯು ಆದೇಶ 27.2.2017 ರಲ್ಲಿ ಗ್ರಾಹಕರಿಗೆ ವಿಧಿಸಿರುವ ಹಿಂಬಿಲ್ಲಿನ ಮೊತ್ತವನ್ನು ವಸೂಲು ಮಾಡುವಂತೆ ಹಾಗೂ ಅನಧಿಕೃತ ಅಧಿಕ ಹೊರೆಯನ್ನು ಅಧಿಕೃತವಾಗಿ ಮಂಜೂರು ಮಾಡಿಸಿಕೊಳ್ಳುವವರೆಗೂ ಕರ್ನಾಟಕ ನಿಯಂತ್ರಣಾ ಆಯೋಗದ ವಿದ್ಯುತ್ ಸರಬರಾಜು ಮತ್ತು ವಿತರಣೆಗಳ ಅಧಿನಿಯಮ–2006 ಷರತ್ತು 42.01 (iii) ರನ್ವಯ ಕ್ರಮ ಕೈಗೊಳ್ಳುವಂತೆ ಆದೇಶಿಸಿರುತ್ತಾರೆ.

5. ಗ್ರಾಹಕರ ಕುಂದು ಕೊರತೆ ವೇದಿಕೆ ತನ್ನ ಆದೇಶ ಪ್ಯಾರ 5 ರಲ್ಲಿ ಈ ರೀತಿ ಅಭಿಪ್ರಾಯ ಪಟ್ಟಿದೆ.

> "ಸ್ಥಾವರದಲ್ಲಿದ್ದ ಎಲ್ಲಾ ಉಪಕರಣಗಳನ್ನು ದೂರುದಾರರು ಬಳಸದಿದ್ದರೂ ಸ್ಥಾವರದ ಮಂಜೂರಾತಿ ಪ್ರಮಾಣ 6 ಕಿ.ವ್ಯಾ.ಗಿಂತ ಅಧಿಕ ಸಂಪರ್ಕಿತ ಹೊರೆಯನ್ನು ಸ್ಥಾವರದ ಆವರಣದಲ್ಲಿ ಹೊಂದಿರುವುದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ವಿದ್ಯುತ್ ಸರಬರಾಜು ಮತ್ತು ವಿತರಣೆಗಳ ಅಧಿನಿಯಮ–2006 ರಷರತ್ತು 42.01 ರನ್ವಯ ಅನಧಿಕೃತ ವಿದ್ಯುತ್ ಬಳಕೆಯಾದ್ದರಿಂದ ಹಾಗೂ ಸ್ವತ: ದೂರುದಾರರೇ ದಿನಾಂಕ 1.10.2015ರ ತಮ್ಮ ಆಕ್ಷೇಪಣಾ ಪತ್ರದಲ್ಲಿ, ಮಂಜುರಾತಿ ಪ್ರಮಾಣಕ್ಕಿಂತ ಅಧಿಕ ಹೊರೆಯ ವಿದ್ಯುತ್ ಉಪಕರಣಗಳನ್ನು ತಮ್ಮ ಸ್ಥಾವರದಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ತಿಳಿಸಿರುವುದು, ದೂರದಾರರು ಅನಧಿಕೃತ ಅಧಿಕ ಹೊರೆಯನ್ನು ಹೊಂದಿರುವುದು ದೃಡಪಡಿಸಿರುವುದರಿಂದ, ಉಪ–ವಿಭಾಗಾಧಿಕಾರಿಗಳು ದೂರುದಾರರ ಸ್ಥಾವರಕ್ಕೆ ವಿಧಿಸಿರುವ ಹಿಂಬಿಲ್ಲು ಕ್ರಮ ಬದ್ದವಾಗಿದೆ ಎಂದು ತಿಳಿಸಿ ದಿನಾಂಕ 15.2.2016 ರಲ್ಲಿ ಸದರಿ ಹಿಂಬಲ್ಲಿಗೆ ಸಂಬಂಧಿಸಿದಂತೆ ಅಂತಿಮ ಆದೇಶವನ್ನು ಹೊರಡಿಸಿ ಸದರಿ ಮೊತ್ತದ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಮ್ಮ ಪ್ರತಿವಾದದಲ್ಲಿ ತಿಳಿಸಿರುವುದು ನಿಯಮ ಬದ್ಧವಾಗಿದೆ ಎಂದು ಈ ವೇದಿಕೆಯು ಪರಿಗಣಿಸಿರುವ ಹಿನ್ನಲೆಯಲ್ಲಿ ದಿನಾಂಕ 15.5.2016 ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪ–ವಿಭಾಗಾಧಿಕಾರಿಗಳು ಸ್ಥಾವರ ಸಂಖ್ಯೆ 7 ECLP-12389 ಕ್ಕೆ ವಿಧಿಸಿರುವ ಹಿಂಬಿಲ್ಲಿನ ಮೊತ್ತ ರೂ.9,600 ಗಳನ್ನು ಪಾವತಿಸಿ ಸ್ಥಾವರಕ್ಕೆ ಸಂಪರ್ಕಗೊಂಡಿರುವ ಅನಧಿಕೃತ ಹೊರೆಯನ್ನು ನಿಯಮಾನುಸಾರ ತೆಗೆದುಹಾಕಲು ಅಥವಾ ಅಧಿಕೃತವಾಗಿ ಅಧಿಕ ಹೊರೆಯನ್ನು ಮಂಜೂರು ಮಾಡಿಸಿಕೊಳ್ಳಲು ದೂರುದಾರರಿಗೆ ಸೂಚಿಸುವ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಲು ತೀರ್ಮಾನಿಸಲಾಗಿದೆ".

6. ವೇದಿಕೆಯು ದಿನಾಂಕ 27.2.207ರ ಆದೇಶದಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

1) ದೂರುದಾರರು ಸಲ್ಲಿಸಿರುವ ದೂರನ್ನು ವಜಾಗೊಳಿಸಲಾಗಿದೆ.

2) ಸ್ಥಾವರ ಸಂಖ್ಯೆ 7 ECLP-12389 ಕ್ಕೆ ದಿನಾಂಕ 15.2.2016 ರಲ್ಲಿ ಸಹಾಯಕ ನಿರ್ವಾಹಕ ಇಂಜಿನಿಯರ್ (ವಿ) ಪೂರ್ವ–7 ನೇ ಉಪ–ವಿಭಾಗದವರು ವಿಧಿಸಿರುವ ಹಿಂಬಿಲ್ಲಿನ ಮೊತ್ತ ರೂ.9600 ಗಳನ್ನು ದೂರುದಾರರಿಂದ ವಸೂಲಿ ಮಾಡುವಂತೆ ಮತ್ತು ಅನುಧಿಕೃತ ಅಧಿಕ ಹೊರೆಯನ್ನು ಅಧಿಕೃತವಾಗಿ ಮಂಜೂರು ಮಾಡಿಸಿಕೊಳ್ಳುವಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ, ವಿದ್ಯುತ್ ಸರಬರಾಜು ಮತ್ತು ವಿತರನೆಗಳ ಅಧಿನಿಯಮ 2006 ರ ಷರತ್ತು 42.01 (iii) ರನ್ವಯ ಕ್ರಮ ಜರುಗಿಸುವಂತೆ ಉಪ–ವಿಭಾಗಾಧಿಕಾರಿಗಳಿಗೆ ಆದೇಶಿಸಲಾಗಿದೆ.

7. ಮೇಲಿನ ದೂರುದಾರರು ಹಾಗೂ ಪ್ರತಿವಾದಿಗಳು ಮಂಡಿಸಿರುವ ಎಲ್ಲಾ ಅಂಶಗಳನ್ನು, ಸಲ್ಲಿಸಿರುವ ವಿವರಗಳನ್ನು ಹಾಗೂ CGRF ರವರು ವ್ಯಕ್ತಪಡಿಸಿರುವ ಅಭಿಪ್ರಾಯ ಹಾಗೂ ಆದೇಶವನ್ನು ಪರಿಶೀಲಿಸಿ, ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಸದರೀ ಸ್ಥಳದಲ್ಲಿ ಅಧಿಕ ಹೊರೆಯ ವಿದ್ಯುತ್ ಉಪಕರಣಗಳನ್ನು ದೂರುದಾರರು ಅಳವಡಿಸಿಕೊಂಡು, ಅನಧಿಕೃತವಾಗಿ ಅಧಿಕ ಹೊರೆಯನ್ನು ಹೊಂದಿರುವುದು, ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಈ ಹಿನ್ನಲೆಯಲ್ಲಿ CGRF ರವರು ಹೊರಡಿಸಿರುವ ಉಲ್ಲೇಖಿತ ಪ್ರಶ್ನಿತ ಆದೇಶವು ಸಮರ್ಪಕವಾಗಿರುವುದು ಕಂಡುಬಂದಿರುತ್ತದೆ. ಆದುದರಿಂದ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಸಹಿ/–
**(ಬಿ.ಎನ್.ಕೃಷ್ಣಯ್ಯ)**
**ವಿದ್ಯುಚ್ಛಕ್ತಿ ಲೋಕಪಾಲರು**

ಗೆ:

1. ಶ್ರೀ ನಾಗಣ್ಣಗೌಡ, ನಂ.270/1, ಶ್ರೀ ಮಂಜುನಾಥ ಪ್ಲಾಜ, ರಾಮ ಮೂರ್ತಿನಗರ ಮುಖ್ಯ ರಸ್ತೆ, ಬೆಂಗಳೂರು – 560 016

2. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಇ–7, ಉಪ–ವಿಭಾಗ, ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ದೂರವಾಣಿ ನಗರ, ಬೆಂಗಳೂರು – 560 016

3. ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಸಿ.ಎ. ನಿವೇಶನ ಸಂಖ್ಯೆ–5, ಪಶ್ಚಿಮ ಕಾರ್ಡ್ ರಸ್ತೆ, 3ನೇ ಹಂತ, ಭೀಮಜ್ಯೋತಿ, ಎಚ್.ಬಿ.ಸಿ.ಎಸ್ ಬಡಾವಣೆ, ಕಾರ್ಡ್ ಆಸ್ಪತ್ರೆ ರಸ್ತೆ ಹತ್ತಿರ, ಬಸವೇಶ್ವರ, ಬೆಂಗಳೂರು – 560 079.

4. ಸರಬರಾಜು ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ

5. ಮಾನ್ಯ ಅಧ್ಯಕ್ಷರು, ಕೆ.ಇ.ಆರ್.ಸಿ ರವರ ಆಪ್ತ ಕಾರ್ಯದರ್ಶಿ

6. ಮಾನ್ಯ ಸದಸ್ಯರು (ಎ), ಕೆ.ಇ.ಆರ್.ಸಿ ರವರ ಆಪ್ತ ಕಾರ್ಯದರ್ಶಿ

7. ಮಾನ್ಯ ಸದಸ್ಯರು (ಎಂ), ಕೆ.ಇ.ಆರ್.ಸಿ ರವರ ಆಪ್ತ ಕಾರ್ಯದರ್ಶಿ

8. ಕಾರ್ಯದರ್ಶಿ, ಕೆ.ಇ.ಆರ್.ಸಿ.

---

**ಆದೇಶ ದಿನಾಂಕ : 09-01-2018**

ಶ್ರೀ ನಾಗಣ್ಣಗೌಡ

ನಂ.270/1, ಶ್ರೀ ಮಂಜುನಾಥ ಪ್ಲಾಜ
ರಾಮ ಮೂರ್ತಿನಗರ ಮುಖ್ಯ ರಸ್ತೆ,
ಬೆಂಗಳೂರು – 560 016

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ)
ಇ–7, ಉಪ–ವಿಭಾಗ
ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
ದೂರವಾಣಿ ನಗರ, ಬೆಂಗಳೂರು – 560 016

ಅಧ್ಯಕ್ಷರು
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ
ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
ಸಿ.ಎ. ನಿವೇಶನ ಸಂಖ್ಯೆ–5
ಪಶ್ಚಿಮ ಕಾರ್ಡ್ ರಸ್ತೆ, 3ನೇ ಹಂತ,
ಭೀಮಜ್ಯೋತಿ, ಎಚ್.ಬಿ.ಸಿ.ಎಸ್ ಬಡಾವಣೆ,
ಕಾರ್ಡ್ ಆಸ್ಪತ್ರೆ ರಸ್ತೆ ಹತ್ತಿರ, ಬಸವೇಶ್ವರ,
ಬೆಂಗಳೂರು – 560 079.